## IN THE COURT OF THE SENIOR CIVIL JUDGE AND JMFC, SOMWARPETE

**CC No. 191/2026**

ಪ್ರಕರಣವನ್ನು ಲೋಕ ಅದಾಲತ್ ನಲ್ಲಿ ಕರೆಯಲಾಯಿತು. ಆರೋಪಿ ಪರ ಶ್ರೀ. ಜಿ.ಈ. ನವೀನ್ ವಕೀಲರು ವಕಾಲತ್ತನ್ನು ಸಲ್ಲಿಸಿದ್ದು, ಮತ್ತು ಆರೋಪಿ ಪರವಾಗಿ ತಪ್ಪನ್ನು ಒಪ್ಪಿಕೊಳ್ಳುವುದಾಗಿ ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆರೋಪಿ ಮೇಲೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15(ಎ), 32(3) ರ ಅಡಿಯಲ್ಲಿ ಆಪಾದನೆಯನ್ನು ರಚಿಸಿ ಆರೋಪಿ ಪರ ವಕೀಲರಿಗೆ ಆಪಾದನೆಯನ್ನು ಓದಿ ಹೇಳಿ ವಿವರಿಸಲಾಯಿತು. ಆರೋಪಿ ತಮ್ಮ, ಮೇಲಿನ ಆಪಾದನೆಯನ್ನು ವಕೀಲರ ಮೂಲಕ ಒಪ್ಪಿಕೊಳ್ಳುವುದಾಗಿ ಮತ್ತು ಆಪಾದನೆ ಒಪ್ಪಿಕೊಳ್ಳಲು ಯಾವುದೇ ಒತ್ತಡವಿಲ್ಲವೆಂದು ತಾವು ವಕೀಲರ ಮೂಲಕ ಆಪಾದನೆಯನ್ನು ಒಪ್ಪಿಕೊಳ್ಳುವುದಾಗಿ ಹೇಳಿದ್ದು, ಆರೋಪಿ ತಪ್ಪೊಪ್ಪಿಗೆಯನ್ನು ವಕೀಲರ ಮೂಲಕ ಸ್ವೀಕರಿಸುವುದು ಸೂಕ್ತವೆಂದು ತೀರ್ಮಾನಿಸಿ ಕೆಳಗಿನಂತೆ–

**ಆದೇಶ**

ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ ಕಲಂ 276ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15(ಎ), 32(3) ರ ಅಡಿಯಲ್ಲಿ ತಪ್ಪಿತಸ್ಥನೆಂದು ಶಿಕ್ಷಿಸಲಾಗಿದೆ.

ಕರ್ನಾಟಕ ಅಬಕಾರಿ ಕಾಯ್ದೆ ಕಲಂ 15(ಎ), ಮತ್ತು 32(3) ಅಡಿಯಲ್ಲಿನ ಅಪರಾಧಕ್ಕಾಗಿ ಆರೋಪಿಗೆ 1000/– ರೂಪಾಯಿಗಳ ದಂಡವನ್ನು ಪಾವತಿಸುವಂತೆ, ಸದರಿ ದಂಡ ಪಾವತಿಸಲು ತಪ್ಪಿದ್ದಲ್ಲಿ 10 ದಿನಗಳ ಸಾದಾ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸುವಂತೆ ಆದೇಶಿಸಲಾಗಿದೆ.

KAKD410003702026



**CC No. 191/2026**

**ಸ್ವತ್ತು ಪಟ್ಟಿ ಸಂಖ್ಯೆ 49/2026 ರಲ್ಲಿ ವಶಪಡಿಸಿಕೊಂಡಿರುವ 1 ರಿಂದ 4 ನೇ ಸ್ವತ್ತುಗಳುಃ-**

1) ೯೦ ಎಂ.ಎಲ್ ನ ತುಂಬಿದ 5 ಒರಿಜಿನಲ್ ಚಾಯ್ಸ ಟೆಟ್ರಾ ಪ್ಯಾಕೆಟ್ ಗಳು ಮೌಲ್ಯ ರಹಿತವಾಗಿರುವುದರಿಂದ ಅವುಗಳನ್ನು ನಾಶಪಡಿಸಲು ಆದೇಶಿಸಿದೆ.

2) ೯೦ ಎಂ.ಎಲ್ ನ ಖಾಲಿಯಾದ 1 ಒರಿಜಿನಲ್ ಚಾಯ್ಸ ಟೆಟ್ರಾ ಪ್ಯಾಕೆಟ್ ಗಳು ಮೌಲ್ಯ ರಹಿತವಾಗಿರುವುದರಿಂದ ಅವುಗಳನ್ನು ನಾಶಪಡಿಸಲು ಆದೇಶಿಸಿದೆ.

3) ಒಂದು ಖಾಲಿ ಪ್ಲಾಸ್ಟಿಕ್ ಲೋಟ ಮೌಲ್ಯ ರಹಿತವಾಗಿರುವುದರಿಂದ ಅದನ್ನು ನಾಶಪಡಿಸಲು ಆದೇಶಿಸಿದೆ.

4) ಅರ್ಧ ಲೀಟರ್ ನ ಎರಡು ಖಾಲಿ ನೀರಿನ ಬಾಟಲ್ ಮೌಲ್ಯ ರಹಿತವಾಗಿರುವುದರಿಂದ ಅದನ್ನು ನಾಶಪಡಿಸಲು ಆದೇಶಿಸಿದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸೋಮವಾರಪೇಟೆ.